ಸಂಖ್ಯೆ :ಕೆಎಸ್‌ಎಟಿ/ಇಎಸ್‌ಟಿ(1)/ಆರ್‌ಸಿಟಿ–ಡಿಎಎಲ್‌/05/2022

ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿ
6 ಮತ್ತು 7ನೇ ಮಹಡಿ, ಕಂದಾಯ ಭವನ
ಕೆ.ಜಿ.ರಸ್ತೆ, ಬೆಂಗಳೂರು – 560009.

ದಿನಾಂಕ: 30.05.2022

# ಸೂಚನಾ ಪತ್ರ

ವಿಷಯ : ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿಯಲ್ಲಿ ಖಾಲಿ ಇರುವ ದಲಾಯತ್ ಹುದ್ದೆಗಳ ನೇಮಕಾತಿ ಕುರಿತು ಅರ್ಹ ಅಭ್ಯರ್ಥಿಗಳು ಮೂಲದಾಖಲಾತಿಗಳ ಪರಿಶೀಲನೆ ಮತ್ತು ಸಂದರ್ಶನಕ್ಕೆ ಹಾಜರಾಗುವ ಬಗ್ಗೆ

ಉಲ್ಲೇಖ : ಈ ಕಚೇರಿಯ ಅಧಿಸೂಚನೆ ಸಂಖ್ಯೆ :ಕೆಎಸ್‌ಎಟಿ/ಇಎಸ್‌ಟಿ(1)/ಆರ್‌ಸಿಟಿ–ಡಿಎಎಲ್‌/05/2022, ದಿನಾಂಕ 09.02.2022

ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿಯಲ್ಲಿ ಖಾಲಿ ಇರುವ ಉಳಿದ ಮೂಲವೃಂದದ ದಲಾಯತ್ ಹುದ್ದೆಗಳಿಗೆ ನೇಮಕಾತಿ ಮಾಡುವ ಬಗ್ಗೆ ಉಲ್ಲೇಖಿತ ಅಧಿಸೂಚನೆಯ ಪ್ರಕಟಣೆಯ ಮೇರೆಗೆ ಈ ಕಚೇರಿಯ 6 ಮತ್ತು 7 ನೇ ಮಹಡಿಯಲ್ಲಿ ದಿನಾಂಕ 01.06.2022 ರಿಂದ 15.06.2022 ರವರೆಗೆ ಅರ್ಹ ಅಭ್ಯರ್ಥಿಗಳ ಮೂಲದಾಖಲೆಗಳ ಪರಿಶೀಲನೆಯನ್ನು ಪೂರ್ವಾಹ್ನ 10 ಗಂಟೆಗೆ ಮತ್ತು ಸಂದರ್ಶನವನ್ನು ಅದೇ ದಿನ ಮಧ್ಯಾಹ್ನ 12 ಗಂಟೆಯ ನಂತರ ನಡೆಸಲು ತೀರ್ಮಾನಿಸಲಾಗಿರುತ್ತದೆ. ಅದರಂತೆ ಈ ಸೂಚನಾ ಪತ್ರದೊಂದಿಗೆ ಅನುಬಂಧಿಸಲಾದ ಪಟ್ಟಿಯಲ್ಲಿರುವ ಅರ್ಹ ಅಭ್ಯರ್ಥಿಗಳನ್ನು ಮೇಲ್ಕಂಡ ದಿನಾಂಕಗಳಂದು ನಡೆಯಲಿರುವ ಮೂಲದಾಖಲೆಗಳ ಪರಿಶೀಲನೆ ಮತ್ತು ಸಂದರ್ಶನಕ್ಕೆ ಹಾಜರಾಗುವಂತೆ ಸೂಚಿಸಿ, ಸೂಚನಾಪತ್ರಗಳನ್ನು ಈಗಾಗಲೇ ತ್ವರಿತ ಅಂಚೆ ಮೂಲಕ ರವಾನಿಸಲಾಗಿದೆ/ರವಾನಿಸಲಾಗುತ್ತಿದೆ. ಆದಾಗ್ಯೂ ಇದರೊಂದಿಗೆ ಅನುಬಂಧಿಸಲಾದ ಪಟ್ಟಿಯಲ್ಲಿ ತಿಳಿಸಿರುವಂತೆ ಆಯಾ ದಿನಾಂಕಗಳಂದು ಅಭ್ಯರ್ಥಿಗಳು ಅರ್ಜಿಯೊಂದಿಗೆ ಸಲ್ಲಿಸಲಾದ ಎಲ್ಲಾ ಮೂಲದಾಖಲೆಗಳೊಂದಿಗೆ ಪೂರ್ವಾಹ್ನ 10 ಗಂಟೆಯೊಳಗೆ ಹಾಜರಾಗುವಂತೆ ಈ ಮೂಲಕವೂ ಸಹ ತಿಳಿಯಪಡಿಸಿದೆ.

ಸಹಿ/–
ವಿಲೇಖನಾಧಿಕಾರಿ
ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿ
ಬೆಂಗಳೂರು